Sri D. PARAMESWARAPPA.—Sir, according to the technical opinion it is not 5,000 acres, but only 3,285 acres of land that is going to be irrigated.

Settlement of the Bills of Contractors entrusted with the work of Thimmanayakanahalli Tank

674. Sri GANGA BOVI (Gulur).—

Will the Minister of State for Minor Irrigation be pleased to state:—

(*a*) the reasons for non-paryment of final bills to the Contractors of Thimmanayakanahalli new tank of Kolala Hobli in Koratagere Taluk even though the work of the said tank was completed about 6 years ago and whether the amount due to them will be paid adding interest to the said amount;

(*b*) the action that will be taken against the officers responsible for the delay ?

Smt. BASAVARAJESWRI (Deputy Minister for Social Welfare) [On behalf of SRI A. J. DODDAMETI (Minster of State for Minor Irrigation)].—

(*a*) The final bills of the contractors have been settled in February 1968.

(*b*) Does not arise in view of reply to clause (*a*) above.

ಶ್ರೀ ಗಂಗಾಬೋವಿ.—ಕೊರಟಗೆರೆ ತಾಲ್ಲೂಕು ಕೋಳಾಲ ಹೋಬಳಿ ತಿಮ್ಮನಾಯಕನಹಳ್ಳಿ ಹೊಸಕೆರೆ ಕೆಲಸ ಮುಗಿದು ಸುಮಾರು 6 ವರ್ಷಗಳಾದರೂ ಕಂಟ್ರಾಕ್ಟುದಾರರುಗಳಿಗೆ ಇದುವರೆವಿಗೂ ಫೈನರ್ ಬಿಲ್ ಕೊಟ್ಟಿಲ್ಲ, ಕಂಟ್ರಾಕ್ಟರುಗಳ ಹೆಸರೇನು ?

† ಶ್ರೀಮತಿ ಬಸವರಾಜೇಶ್ವರಿ.—ಫೈನರ್ ಬಿಲ್ ಕೊಡರಾಗಿದೆ. ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಹೆಸರು ಬೇಕಾದರೆ ಹೇಳುತ್ತೇನೆ. ಮುದ್ದರಂಗಯ್ಯ, ತಾಲನೇಶಯ್ಯ, ರತ್ನಯ್ಯ, ಸಯಿದ್ ಉಮರ್, ಲಕ್ಷ್ಮೀನರಸಿಂಹಯ್ಯ, ಅಬ್ದುರ್ ಅಜೀಜ್.

ಶ್ರೀ ಗಂಗಾಬೋವಿ.—ಎಷ್ಟು ಹಣ ಕೊಡಬೇಕಾಗಿದೆ ಎಂದು ತಪಶೀಲು ಹೇಳುತ್ತೀರಾ ?

ಶ್ರೀಮತಿ ಬಸವರಾಜೇಶ್ವರಿ.—ಫೈನರ್ ಬಿಲ್ಲುಗಳು ಪಾವತಿಯಾಗಿವೆ. ಸೇಕಡ 5 ರಷ್ಟು ಡಿಪಾಜಿಟ್ ಇಟ್ಟುಕೊಂಡಿರುವುದು ಮಾತ್ರ ನಮ್ಮಲ್ಲದೆ.

ಶ್ರೀ ಗಂಗಾಬೋವಿ.—ಫೈನರ್ ಬಿಲ್ಲನ್ನು ಕೊಟ್ಟಮೇಲೆ ಸೇಕಡ 5ರಷ್ಟು ಸರಕಾರದಲ್ಲಿದೆ ಎಂದು ಹೇಳುವುದರ ಅರ್ಥವೇನು ?

ಶ್ರೀಮತಿ ಬಸವರಾಜೇಶ್ವರಿ.—ಪುನಃ ರಿವೈಜ್ಡ್ ಎಸ್ಟಿಮೇಟ್ ಆಗಿದೆ. ಅದನ್ನು ಅಪ್ರೂವ್ ಮಾಡುವವರೆಗೆ ಡಿಪಾಜಿಟ್ಟನ್ನು ಹಿಡಿದುಕೊಳ್ಳರಾಗಿದೆ.

ಶ್ರೀ ಗಂಗಾಬೋವಿ.—ಕೆಲಸವಾಗಿ 6 ವರ್ಷವಾದರೂ ರಿವೈಜ್ಡ್ ಎಸ್ಟಿಮೇಟ್ ಆಗಿರುವುದರಿಂದ ಸೇಕಡ 5ರಷ್ಟು ಡಿಪಾಜಿಟ್ಟು ಹಿಡಿದುಕೊಂಡಿದೆ ಎಂದು ಹೇಳಿರುವುದು ಸತ್ಯಕ್ಕೆ ದೂರವಾದುದು. ಅದುದರಿಂದ ಸಂಬಂಧಪಟ್ಟ ಆಫೀಸರುಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀಮತಿ ಬಸವರಾಜೇಶ್ವರಿ.—ಇದರಲ್ಲಿ ಸತ್ಯಕ್ಕೆ ದೂರವಾದ ಅಂಶವೇನೂ ಇಲ್ಲ. ಈಗಾಗಲೇ ಫೈನರ್ ಬಿಲ್ ಕೊಟ್ಟು ರಿವೈಜ್ಡ್ ಎಸ್ಟಿಮೇಟ್ ಮಾಡಿದೆ. ಚೀಫ್ ಎಂಜಿನಿಯರು ಎಸ್ಟಿಮೇಟನ್ನು ಸ್ಯಾಂಕ್ಷನ್ ಮಾಡಿದಮೇಲೆ 5 ಪರ್ಸೆಂಟ್ ಇರುವುದನ್ನು ಕೊಡರಾಗುವುದು.